# ಮಾದರಿ ಪ್ರಶ್ನೆ ಪತ್ರಿಕೆ ೧೦

## ಪ್ರಥಮ ಭಾಷೆ ಕನ್ನಡ        ೧೦ ನೇ ತರಗತಿ

## ಗರಿಷ್ಠ ಅಂಕ: ೧೦೦        ಅವಧಿ : 2.45 ಗಂಟೆಗಳು

## ಭಾಗ -'ಎ'

**ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೧*೧**

೧ .ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?

೨.ಬೆಳಕಿಗೊಲಿದವರಿಗೆ  ಯಾವುದು ಕಾಣುವುದಿಲ್ಲ ?

೩.ಶ್ರೀರಾಮಾನುಜರು ಯಾವುದಕ್ಕೆ ಮಾರ್ಗ ತೋರಿಸುವವರು ಎಂದು ಶಾಸನದಲ್ಲಿ ಹೇಳಲಾಗಿದೆ ?

೪.ದೇವನೂರು ಮಹಾದೇವರಿಗೆ ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು ?

೫. ಶಾನುಭೋಗರ ಭಾಗಕ್ಕೆ ಖಿರ್ದಿ ಪುಸ್ತಕವು ಏನಾಗಿತ್ತು ?

೬.ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?

೭.ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ?

೮.ಗಡಿಯ ಆಚೆ -ಈಚೆ ಹರಿದದ್ದು ಏನು ?

೯.ಕವಿ ರನ್ನನು ಶ್ರೀಕವಿರತ್ನಂ ಎಂದು ಎಲ್ಲಿ ಕೊರೆಸಿಕೊಂಡಿದ್ದಾನೆ ?

೧೦.ಕ್ರಿಯಾ ಸ್ವಾತಂತ್ರ್ಯ ಎಂದರೇನು?

೧೧.ಯಾವುದನ್ನು ತೊರೆದು ಬಾಳಬೇಕು ?

**ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨ =೧೮**

೧೨. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?

೧೩.ವಿದ್ಯಾರ್ಥಿಗಳಿಗೆ ಗೊರೂರರನ್ನು ನೋಡಿ ಭಯವಾಗಲು ಕಾರಣವೇನು ?

೧೪. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ ?

೧೫ .ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯವೇನು ?

೧೬.ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ತಿಳಿಸಿ

೧೭.ಯಜ್ಞಾಶ್ವದ ಹಣೆಪಟ್ಟಿಯ ಮೇಲಿದ್ದ ಬರಹ ನೋಡಿ ಲವನು ಉರಿದೇಳಲು

mamatabhagwat1@gmail.com

ಕಾರಣವೇನು?

೧೮. ಸಂಕಟಕೆ ಗಡಿ ಇಲ್ಲ ಏಕೆ ?

೧೯. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ?

೨೦.ಒಗಟುಗಳಿಂದ ಶೈಕ್ಷಣಿಕವಾಗಿ ಆಗುವ ಲಾಭವೇನು ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೬**

೨೧. ''ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಗಳಿಗೆ ಸೊದೆಯನಿಕ್ಕುವುದು ''.

೨೨.''ಹುಲಿ ಈಗ ಎಷ್ಟು ಹಸಿದಿರಬೇಕು ''.

೨೩. ''ಹೊಸಗಾಲದ ಹಸುಮಕ್ಕಳ ಹರಸಿ .''

೨೪. '' ಹೊಡೆದರೊ ಗುಂಡ ಕರುಣ ಇಲ್ಲದಂಗ ''

**ಈ ಸಾಹಿತಿಗಳ ಸ್ಥಳ ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨*೩=೬**

**೨೫. ವಿ.ಕೃ.ಗೋಕಾಕ**

**೨೬. ಜೇಡರ ದಾಸಿಮಯ್ಯ**

**೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ೧*೪=೪**

ಕಲುಷಿತವಾದೀ-------------------

------------------------------

------------------------------

--------------------ಮುಟ್ಟೋಣ ಅಥವಾ

ಮತಗಳೆಲ್ಲವೂ-----------------------

-------------------------------------

----------------------------------

--------------------------ಬಿತ್ತೋಣ

**೨೮.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪*೧=೪**

ಚಂ || ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

ಧುರಮೆ    ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ|
ರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ||

ಪ್ರಶ್ನೆಗಳು :

೧. ಕುರುಕುಲನಂದನವನಕ್ಕೆ ಹಾನಿ ಮಾಡಿದವರು ಯಾರು ?

೨.ಪುಣ್ಯದೊಂದು ಪೆರ್ಮರನುಳಿವಂತೆ ಉಳಿದವರು ಯಾರು ?

೩.ಗಾಂಧಾರಿಯ ಅಸಹಾಯಕತೆ ಪ್ರಸ್ತುತ ನುಡಿಯಲ್ಲಿ ಹೇಗೆ ವ್ಯಕ್ತವಾಗಿದೆ ?

೪.ಈ ನುಡಿಯಲ್ಲಿ ನಿಮಗೆ ಮೆಚ್ಚಿಕೆಯಾದ ಅಂಶ ಯಾವುದು ? ಏಕೆ ?

**ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು. ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮**

೨೯. ಮುಂಬೈ ಮತ್ತು ಪೂನಾ ನಗರಗಳಲ್ಲಿ ವಿಶ್ವೇಶ್ವರಯ್ಯನವರು ಸಲ್ಲಿಸಿದ ಸೇವೆಯನ್ನು ವಿವರಿಸಿ.

ಅಥವಾ

ವಿಶ್ವೇಶ್ವರಯ್ಯನವರ ಸಾಧನೆಗೆ ಸಂದ ಪ್ರಶಸ್ತಿ ಗೌರವಗಳ ಕುರಿತು ಬರೆಯಿರಿ.

೩೦. ಬೇಂದ್ರೆಯವರ ಕಾಲದ ಹಕ್ಕಿಯ ಹಾರಾಟದ ಗತಿ ವಿವರಿಸಿ.

ಅಥವಾ

ಹಕ್ಕಿಯನ್ನು ಕಾಲದ ಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳು ಯಾವುವು ?

೩೧. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.. ೪=೨+೨

ದುಷ್ಟಬುದ್ಧಿಯುಂ ತನ್ನ ಮನೆಗೆ ಬಂದು ತಮ್ಮಯ್ಯನ ಕಯ್ಯಂ ಪಿಡಿದು ಕಟ್ಟೇಕಾಂತಕ್ಕುಯ್ದು ತದ್ವೃತ್ತಾಂತಮೆಲ್ಲಮಂ ತಿಳಿಯೆ ಪೇಳ್ದು ನಿಮ್ಮೊಂದು ವಚನಮಾತ್ರದಿಂ ನಮ್ಮ ಪರಿಗ್ರಹಮೆಲ್ಲಂ ಪಲವುಕಾಲಂ ಪಸಿಯದುಂಡು ಬಾಳ್ವಂತರ್ಥಂ ಸಾರ್ದಪುದಾ ನೀವಾ ಮರದ ಪೊಳಲೊಳಡಂಗಿರ್ದು ಧರ್ಮಬುದ್ಧಿಯೆ ಪೊನ್ನಂ ಕೊಂಡುಯ್ದುನೆಂದು ನುಡಿಯಿಮೆಂಬುದುಮಾತನಿಂತೆಂದಂ

ಪರಧನಹರಣಮುಂ ವಿಶ್ವಾಸಘಾತಕಮುಂ ಸ್ವಾಮಿದ್ರೋಹಮುಂ ಇವೆಲ್ಲಮೇಗೆಯ್ದುಂ ಕಿಡಿಸುಗುಮಿಂತಪ್ಪುದೆಲ್ಲಮಂ ನೀನರಿದಿರ್ದನ್ನುಮಂ ಸಾಕ್ಷಿ ಮಾಡಿ ನುಡಿಸಿ ಕಿಡಿಸಲ್ವಗೆದೆ

mamatabhagwat1@gmail.com

,ನಿನ್ನ  ಪಳುವಗೆ ನಮ್ಮ ಕುಲಮನೆಲ್ಲಮನಳಿವ ಬಗೆ ಎಂದನು .

ಪ್ರಶ್ನೆಗಳು :

೧. ದುಷ್ಟಬುದ್ಧಿಯು ಏಕಾಂತದಲ್ಲಿ ತನ್ನ ತಂದೆಗೆ ಏನು ಹೇಳಿದನು ?

೨. ದುಷ್ಟಬುದ್ದಿಯ ತಂದೆಯು ದುಷ್ಟಬುದ್ಧಿಗೆ ಹೇಗೆ ಬುದ್ಧಿವಾದ ಹೇಳಿದನು ?

ಭಾಗ – 'ಬಿ'

ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು-೨೦ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. ೧೦*೧=೧೦

೩೧.'ಗ್ರಹ' ಪದದ ತದ್ಭವ ರೂಪ ----------

ಎ.) ಗೃಹ    ಬಿ.) ಗರ  ಸಿ) ಗ್ರಹಚಾರ  ಡಿ )ಗುಹೆ

೩೨. 'ಬಟ್ಟಬಯಲು' ಪದದಲ್ಲಿರುವ ವ್ಯಾಕರಣ ವಿಶೇಷ ----------

ಎ) ಜೋಡು ನುಡಿ   ಬಿ) ನುಡಿಗಟ್ಟು  ಸಿ)ದ್ವಿರುಕ್ತಿ  ಡಿ) ಅನುಕರಣಾವ್ಯಯ

೩೩. ಅಯ್ಯೋ ಹೀಗಾಗಬಾರದಿತ್ತು ಈ ವಾಕ್ಯದಲ್ಲಿ ಬಳಸಬೇಕಾದ ಚಿಹ್ನೆ --------

ಎ) ಉದ್ಧರಣ ಬಿ) ವಾಕ್ಯವೇಷ್ಠನ  ಸಿ) ಅರ್ಧವಿರಾಮ  ಡಿ) ಭಾವಸೂಚಕ

೩೪. 'ಹುಲಿಯ ಮುಖ ಪೆಚ್ಚಾಯಿತು' ಈ ವಾಕ್ಯವು ವಾಕ್ಯದ ಈ ಪ್ರಕಾರಕ್ಕೆ ಉದಾಹರಣೆಯಾಗಿದೆ

ಎ ) ಸಾಮಾನ್ಯ ವಾಕ್ಯ  ಬಿ) ಸಂಯೋಜಿತ ವಾಕ್ಯ  ಸಿ)ನಿಷೇಧಾರ್ಥಕ ವಾಕ್ಯ ಡಿ ) ಸಾಧಾರಣ ವಾಕ್ಯ

೩೫. 'ಆ ದೇವತೆ ' ಪದವು ಈ ಸಮಾಸದ ಉದಾಹರಣೆಯಾಗಿದೆ –-----

ಎ) ಕರ್ಮಧಾರಯ  ಬಿ)ದ್ವಂದ್ವ ಸಮಾಸ   ಸಿ) ಗಮಕ ಸಮಾಸ ಡಿ )ಕ್ರಿಯಾ ಸಮಾಸ

೩೬. 'ಪೊನ್ನಂ' ಪದದಲ್ಲಿರುವ ವಿಭಕ್ತಿ –----

ಎ) ಪ್ರಥಮಾ  ಬಿ) ದ್ವಿತೀಯಾ   ಸಿ) ತೃತೀಯಾ  ಡಿ ) ಚತುರ್ಥಿ

೩೭. 'ಪರಕೆ'  ಪದದ ಹೊಸಗನ್ನಡ ರೂಪ –----

ಎ)  ಪೊರಕೆ  ಬಿ) ಪರಸು  ಸಿ)ಹರಕೆ  ಡಿ) ನರಕ

೩೮.' ಹುಲಿ ಈಗ ಎಷ್ಟು ಹಸಿದಿರಬೇಕು '  ಈ ವಾಕ್ಯದಲ್ಲಿರುವ ಪರಿಮಾಣವಾಚಕ ಪದ ---

ಎ)  ಹುಲಿ  ಬಿ) ಹಸಿದಿರಬೇಕು  ಸಿ) ಈಗ  ಡಿ ) ಎಷ್ಟು

೩೯. ಕೆಳಗಿನವುಗಳಲ್ಲಿ ಮಧ್ಯಮಪುರುಷ ಸರ್ವನಾಮ-------

ಎ) ನೀವು ಬಿ) ನಾವು ಸಿ )ತಾವು ಡಿ )ಅವರು

೪೦. 'ನೆನಪು ' ಪದದಲ್ಲಿರುವ ವ್ಯಾಕರಣಾಂಶ –------

ಎ) ಕೃದಂತಭಾವನಾಮ ಬಿ) ಕೃದಂತಾವ್ಯಯ ಸಿ) ಕೃದಂತನಾಮ ಡಿ ) ತದ್ಧಿತಾಂತ

೪೧. 'ದುರುದುರನೆ ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ –---

ಎ) ದ್ವಿರುಕ್ತಿ ಬಿ) ಅನುಕರಣಾವ್ಯಯ ಸಿ) ಜೋಡುನುಡಿ ಡಿ) ನುಡಿಗಟ್ಟು

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ.೪*೧=೪**

೪೨. ಬಾಳಲಿ : ವಿಧ್ಯರ್ಥಕ : : ಬಾಳಿಯಾನು : -----

೪೩.ಶ್ರೀಮನ್ಮಹಾ : ಅನುನಾಸಿಕ ಸಂಧಿ : : ಬೃಹಚ್ಛತ್ರ :-----

೪೪. ಸಿರಿವಂತ : ತದ್ಧಿತಾಂತ ನಾಮ: : ಸಿರಿತನ : ------

೪೫. ಹಳತು : ಗುಣವಾಚಕ : : ಹನ್ನೆರಡು : -------

**೪೬. ಈ ಕೆಳಗಿನ ಪದ್ಯಭಾಗಕ್ಕೆಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩**

ಏನು ಹೇಳೈ ಕರ್ಣಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ||

ಅಥವಾ

ಎನಗೆ ನಿಮ್ಮಡಿಗಳಲಿ ಸಮಸೇ
ವನೆಯೆ ದೇವ ಮುರಾರಿಯಂಜುವೆ
ನೆನಲು ತೊಡೆಸೋಂಕಿನಲಿ ಸಾರಿದು ಶೌರಿಯಿಂತೆಂದ |

೪೭.ಈ ಕೆಳಗಿನ ಪದ್ಯಭಾಗದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ.೧*
'ಜೀವನರಥ'
ಅಥವಾ
'ಚಿಕ್ಕೆಯ ಮಾಲೆ'

ಭಾಗ -'ಸಿ'

ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.

೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೩=೩
*ಮನೆಗೆ ಮಾರಿ ,ಪರರಿಗೆ ಉಪಕಾರಿ.
*ಇಬ್ಬರ ಜಗಳ ಮೂರನೆಯವನಿಗೆ ಲಾಭ
*ಮಾಡಿದ್ದುಣ್ಣೋ ಮಹರಾಯ
೪೯. ನಿಮಗೆ ಬೇಕಿರುವ ಪುಸ್ತಕಗಳನ್ನು ಕಳಿಸಿಕೊಡುವಂತೆ ಕೋರಿ ಧಾರವಾಡದಲ್ಲಿರುವ ಕರ್ನಾಟಕ ಪುಸ್ತಕ ಪ್ರಕಾಶನದವರಿಗೊಂದು ಪತ್ರ ಬರೆಯಿರಿ.
ಅಥವಾ
ಪೂರ್ವಸಿದ್ಧತಾ ಪರೀಕ್ಷೆವರೆಗಿನ ನಿಮ್ಮ ಅಭ್ಯಾಸದ ಪ್ರಗತಿ ತಿಳಿಸಿ ಮಧುಗಿರಿಯಲ್ಲಿರುವ ನಿಮ್ಮ ತಾಯಿಯವರಿಗೆ ಪತ್ರ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫
೧.ಯುವಜನತೆಯ ಮೇಲೆ ಆಗುತ್ತಿರುವ ತಂತ್ರಜ್ಞಾನದ ಪ್ರಭಾವ
೨.ಬ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವಜನತೆಯ ಪಾತ್ರ
೩.ನಿರುದ್ಯೋಗ ಸಮಸ್ಯೆ ಮತ್ತು ಪರಿಹಾರಗಳು

mamatabhagwat1@gmail.com